ಮೇಲೆ ಅದೇ ದುಡ್ಡು ಹಾಕಿ ಮನೆ ಕಟ್ಟಿ ಕಟ್ಟಿ ಬಾಡಿಗೆಗೆ ಬಿಟ್ರು. ಈಗ ಕೈತುಂಬ ಹೆಂಗೋ ಬಾಡಿಗೆ ಬರುತ್ತೆ. ನೆಮ್ಮದಿಯಾಗಿದಾರೆ, ಇರಲಪ್ಪ; ನಮ್ಮಗಳಿಗೆ ಇರದು ಒಂದೇ ಅಣ್ಣಯ್ಯನು. ನಮ್ತಾಯಿ, ಅಜ್ಜಿ,ಆಗಲೇ ಹೋಗಿಟ್ಟು ಅನ್ನಿ.

ಹೆಣ್ಮಕ್ಳು ನಮ್ಮೊವರಿಗೂ ದೊಡ್ಡ ದೊಡ್ಡದಾಗಿ ಸೈಟ್‌ಗಳನ್ನ ಮಾಡಿ ಕೊಟ್ಟಿದ್ರು ನೋಡಿ. ಏನಾಯ್ತು? ನಮ್ಮಕ್ಕ ಇರಕ್ಕೊಂದು ಮನೆ ಇಟ್ಕಂಡು ಉಳಿದಿದ್ದನ್ನ ಗಂಡು ಮಕ್ಳು ಓದ್ಸಕ್ಕೆ ಅಂತ ಮಾರ್ಕಂಡ್ಳು, ಮಕ್ಕಳು ಅಮೆರಿಕಾದಲ್ಲಿ ಇದಾರೆ. ಅಕ್ಕ-ಭಾವ ಬ್ಯಾಟರಾಯನಪುರದಲ್ಲಿದಾರೆ. ಇನ್ನು ನನ್ನ ತಂಗಿ, ಎಲ್ಲ ಹಂಗೆ ಇಟ್ಕಂಡಿದಾಳೆ. ಅವಳು ಕಿಲಾಡಿ, ಕಾಸಲ್ಲಿ ಬಾಳ ಬಿಗಿ, ನಮ್ಮಮ್ಮನಂಗೆ ಕೈ ಬಿಚ್ಚಲ್ಲ... ಇನ್ನು ನನ್ ಕಥೆ ತಗಳಿ... ನನ್ನ ಫ್ರೆಂಡ್ ಜೊತೆನಲ್ಲಿ ಚೀಟಿ ಮಾಡಿ ಎಲ್ಲ ಮೋಸ ಆಗೋಯ್ತು. ಕೊನೆಗೆ ಮನೆ ಮಾತ್ರ ಉಳಸ್ಕಂಡು ಪಕ್ಕದ ದೊಡ್ಡ ಸೈಟು ಮಾರಿ ಎಲ್ರಿಗೂ ದುಡ್ಡು ಕೊಟ್ಟೆ ಗೀತಾವ್ರೆ. ಊರು ಮನೆ, ನಂಬಿಕೆ ನೋಡಿ. ನಮ್ಮಣ್ಣಯ್ಯಂಗೆ ಆವತ್ತಿಂದ ನನ್ ಮೇಲೆ ಅಂಗಂಗೇ ಸೊಲ್ಪ ಬೇಜಾರು, ದೊಡ್ಡಾಸ್ತಿ ಹಾಳು ಮಾಡಕಂಡಳು ಅಂತ. ಏನಂದ್ರೆ ನಮ್ಮೆಜಮಾನು ಒಳ್ಳೇರು, ಬಿ.ಈ.ಎಲ್.ನಲ್ಲಿ ಕೆಲ್ಸ ಮಾಡತಾರೆ, ಹೆಂಗೋ ಬಚಾವಾದೆ. ಮಗಳು ಒಬ್ಬಳೇ. ಮೊಮ್ಮಗಳು ಒಂದೇ. ಹೆಂಗೋ ಹೊರೆ ಬೀಳಲಿಲ್ಲ... ಮಗಳು ಅಳಿಯ ಇಬ್ರೂ ಸಾಫ್ಟ್‌ವೇರ್ ಇಂಜಿನಿಯರ್ಸ್, ಅಳಿಯ ಅಂತೂ ಚಿನ್ನ ಬಿಡಿ.'

'ಹೂಂ... ಅಳಿಯ ಅಪರಂಜಿ, ನಿನ್ನ ಮಗಳು ಗುಲಗಂಜಿ' ಎಂದು ಜೋರಾಗಿ ನಕ್ಕ ರಾಜಿ ಕಡೆಗೆ ಇಬ್ರೂ ತಿರುಗಿದಾಗ, ಮಾವಿನಮರದ ರೆಂಬೆ ಹಿಡದು ನಿಂತಿದ್ದಳು. 'ಏ, ನೀನ್ಯಾವಾಗ ಬಂದೆ?' ಎಂದು ಗೀತಾ ಕೇಳಿದಳು.

'ಅದೇ ಪದ್ಮಕ್ಕ, ನಿಮ್ಮುಂದೆ ಅಪರಂಜಿಯ ಗುಲಗಂಜಿ ಜೊತೆಯಿಟ್ಟು ತೂಗುವಾಗ.' ಮೂವರೂ ನಕ್ಕರು. ಗೀತಾ ಕಾಫಿಗೆ ಕಣ್ಣಲ್ಲೇ ತಿಳಿಸಿದಳು. ಎರಡು ನಿಮಿಷ, ಕಾಫಿ ಬಂತು.

'ನಾನು ರಾಜಿ ಎಕ್ಸ್‌ಪ್ರೆಸ್ ಅಂತ ಹೆಸರಿಟ್ಟಿದೀನಿ, ನಮ್ಮನೆಗೆ ಇಷ್ಟು ದಿನ ಬಂದ ಮೇಡ್ ಸರ್ವೆಂಟಲ್ಲಿ ಇಷ್ಟು ಚುರುಕು ಮೆಣಸಿನಕಾಯಿ ಯಾರೂ ಇರ್ಲಿಲ್ಲ ಪದ್ಮ.'



ನಗುತ್ತಾ ರಾಜಿ ಒಳ ಹೋದಳು. ಪದ್ಮ ಮಾತು ಮುಂದುವರೆಸಿದಳು. 'ನಾನು ಸಾಂಬಾರ್ ಪುಡಿ ಮಾಡಕಬೇಕಾಗಿತ್ತು. ಅದಕ್ಕೆ ಇವಳನ್ನ ಇವತ್ತು ಕರಕಂಡು ಹೋಗಣ ಅಂತ ಇಲ್ಲಿಗೆ ಬಂದೆ. ಎತ್ತಲಾಗಾದ್ರೂ ಹೋಗ್ರಿಟ್ರೆ ಅಂತ! ಒಂದೊಂದು ದಿನ ಹೆಚ್ಚಿಗೆ ಕೆಲಸ ಬಿದ್ದಾಗ ಬಂದು ಕೆಲಸ ಮಾಡಿಕೊಡತಾಳೆ ಅನ್ನಿ, ಸ್ನೇಹಕ್ಕೆ...' ಗೀತಾಳಿಗೆ ಅತ್ತ ಗಮನವಿರಲಿಲ್ಲ. ಕುತೂಹಲ ತಣಿಯದೆ ಮತ್ತೆ ಊರು ಮನೆ ಸುದ್ದಿಗೆ ತಿರುಗಿ ಬಂದಳು.

''ಪದ್ಮ, ಇಲ್ಲೊಬ್ರು ಅಜ್ಜ ಖಾಕಿ ಶರ್ಟ್ ನಿಕ್ಕರ್ ಹಾಕ್ಕೊಂಡು, ಸೈಕಲ್ ಮೇಲೆ ಸಿಳ್ಳೆ ಹಾಕ್ಕೊಂಡು ದಿನಾ ಹೋಗ್ತಾರೆ. ಅವ್ರು ನಿಮಗೆ ಗೊತ್ತಾ? ಈ ಮನೆಗೆ ಬಂದು ಹತ್ತು ವರ್ಷ ಆಯ್ತು, ನಾವು, ಆವತ್ತಿನಿಂದ ಹಾಗೆ ಇದ್ದಾರೆ, ಏನ್ ಚೆನ್ನಾಗಿ ಹಳೆಹಾಡನ್ನ ಸಿಳ್ಳೇಲಿ ಹಾಡಕಂತ ಹೋಗತಾರೆ ಬಿಂದಾಸಾಗಿ ಅಂತೀರಾ... ಮನೆಮನೆಗೆ ಹಾಲು ಹಾಕ್ತಾರೆ ಅನ್ಸುತ್ತೆ.'

'ಅವ್ರೂ... ನಮ್ಮ ಮತ್ತೀಕೆರೆ ಪಟೇಲಪ್ಪಾರು ಅನ್ನಿ.